**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು
ಎಸ್.ಸಿ ನಂಃ 9/2022

| | | |
|---|---|---|
| ಸಾಕ್ಷಿದಾರರ ಹೆಸರು | - ರವಿ ಜಿ.ಎ. | ಪಿಡಬ್ಲೂ - 01 |
| ತಂದೆಯ ಹೆಸರು | - ಅಣ್ಣಪ್ಪ | ಸಿಡಬ್ಲೂ - 01 |
| ವಯಸ್ಸು | - 39 ವರ್ಷ | |
| ಉದ್ಯೋಗ | - ಪಿಎಸ್ಐ, ಚಿಕ್ಕಮಗಳೂರು ನಗರ ಪೊಲೀಸ್ ಠಾಣೆ | |
| ವಾಸ ಸ್ಥಳ | - ಚಿಕ್ಕಮಗಳೂರು | |

ದಿನಾಂಕಃ 14-10-2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

*(**3** ನೇ ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, **1** ನೇ ಆರೋಪಿ ಬಾಡಿ ವಾರೆಂಟ್ ನಲ್ಲಿದ್ದು ಇಬ್ಬರನ್ನೂ ಈ ದಿನ **jitsi app** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಚಿಕ್ಕಮಗಳೂರು ಮತ್ತು ಬೆಳಗಾವಿ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿತರಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಎಂದು ಖಾತ್ರಿಪಡಿಸಿಕೊಳ್ಳಲಾಯಿತು.)*

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ದಿನಾಂಕಃ 18-11-2019 ರಿಂದ 04-06-2022 ರವರೆಗೆ ಮೂಡಿಗೆರೆ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕಾರ್ಯ ನಿರ್ವಹಿಸಿದ್ದೇನೆ.

2. ದಿನಾಂಕಃ 17-07-2021 ರಂದು ಮೇಲಾಧಿಕಾರಿಗಳ ಆದೇಶದಂತೆ ಆಗ್ಗೆ ಮುಂದೆ ಬರುತ್ತಿದ್ದ ಬಕ್ರೀದ್ ಹಬ್ಬದ ಪ್ರಯುಕ್ತ ವಿಶೇಷ ರಾತ್ರಿ ರೌಂಡ್ಸ್ ಕರ್ತವ್ಯವನ್ನು ನಿರ್ವಹಿಸಲು ಸೂಚಿಸಿದ

ಮೇರೆಗೆ ಅದೇ ದಿನ ರಾತ್ರಿ 10.00 ಗಂಟೆಗೆ ನಾನು ಮೂಡಿಗೆರೆ ಠಾಣೆಗೆ ಹೋಗಿ ಠಾಣಾ ಸಿಬ್ಬಂದಿಗಳಾದ ಚಾಸಾ-8 ಚೇತನ್ , ಚಾಸಾ-9 ದಯಾನಂದ್ , ಚಾಸಾ-10 ವಿಜಯಕುಮಾರ್ , ಚಾಸಾ-11 ರೋಹಿತ್ ರವರೊಂದಿಗೆ ಕೆಎ-18/ಜಿ-712 ನೊಂದಣಿ ಸಂಖ್ಯೆಯುಳ್ಳ ಇಲಾಖಾ ಜೀಪ್‌ನಲ್ಲಿ ಚಾಸಾ-12 ರುದ್ರೇಶ್ ರವರ ಚಾಲನೆಯಲ್ಲಿ ರಾತ್ರಿ 10.10 ಗಂಟೆಗೆ ಠಾಣೆಯಿಂದ ಹೊರಟಿರುತ್ತೇವೆ.

3. ಬೀಜುವಳ್ಳಿ , ಘಟ್ಟದ ಹಳ್ಳಿ , ಮಾಕೋನಹಳ್ಳಿ ಮಾರ್ಗವಾಗಿ ಕನ್ನಾಪುರ, ಬಸ್ಗಲ್, ಕಡೆ ಮಾಟಗಲ್, ಕೊಲ್ಲಿಬೈಲು, ಬಿಳುಗುಳ, ಹೆಸ್ಗಲ್ ಕಡೆಗಳಲ್ಲಿ ಗಸ್ತು ಮಾಡಿಕೊಂಡು ದಿನಾಂಕಃ 18-07-2021 ರ ಬೆಳಗಿನ ಜಾವ 2.00 ಗಂಟೆ ಸುಮಾರಿಗೆ ಮೂಡಿಗೆರೆ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಹತ್ತಿರ ಗಸ್ತು ಕರ್ತವ್ಯದಲ್ಲಿ ಇದ್ದಾಗ ಜಿಲ್ಲಾ ನಿಸ್ತಂತು ಕೊಠಡಿಯಿಂದ ನನಗೆ ದೂರವಾಣಿ ಕರೆ ಬಂದಿರುತ್ತದೆ. ಮುದ್ರೆಮನೆ ಬಸ್ ನಿಲ್ದಾಣದ ರಸ್ತೆಯ ತಿರುವಿನಲ್ಲಿರುವ ಹಂಪ್ಸ್ ಹತ್ತಿರ ಯಾರೋ ನಾಲ್ಕು - ಐದು ಜನರು ದಾರಿಯಲ್ಲಿ ಓಡಾಡುವ ವಾಹನಗಳನ್ನು ತಡೆದು ಅಡ್ಡಗಟ್ಟುತ್ತಿರುವ ಬಗ್ಗೆ ಮಾಹಿತಿ ಬಂದಿರುವ ಬಗ್ಗೆ ನನಗೆ ತಿಳಿಸಿರುತ್ತಾರೆ. ನಾನು ಕೂಡಲೇ ಮೇಲೆ ಹೇಳಿದ ಜೀಪ್ ನಲ್ಲಿ ಮೇಲೆ ಹೇಳಿದ ಸಿಬ್ಬಂದಿಗಳೊಂದಿಗೆ ಹೊರಟು, ಮೇಲೆ ಹೇಳಿದಂತೆ ನನಗೆ ಮಾಹಿತಿ ಬಂದಿದ್ದ ಸ್ಥಳಕ್ಕೆ ಹೊರಟಿರುತ್ತೇನೆ.

4. ಅದೇ ದಿನ ಠಾಣಾ ಸರಹದ್ದಿನಲ್ಲಿ ವಿಶೇಷ ಗಸ್ತಿನಲ್ಲಿದ್ದ ಚಾಸಾ-13 ಪ್ರೊಬೇಷನರಿ ಪಿ ಎಸ್ ಐ ಮಂಜುನಾಥ ಮತ್ತು ಚಾಸಾ-16-ಸಿಪಿಸಿ ಗಿರೀಶ್ ರವರಿಗೆ ಮತ್ತು ಚಾಸಾ-15 ಠಾಣಾ ಎನ್ ಆರ್ ಓ ಎಎಸ್‌ಐ ತಿಮ್ಮಪ್ಪ , ಚಾಸಾ-14 ಪ್ರೊಬೇಷನರಿ ಪಿಎಸ್ ಐ ಭರಮಪ್ಪ ರವರಿಗೆ ಮುದ್ರೆಮನೆ ಬಸ್ ನಿಲ್ದಾಣದ ರಸ್ತೆಯ ತಿರುವಿನಲ್ಲಿರುವ ಹಂಪ್ಸ್ ಹತ್ತಿರ ಬರಲು ಫೋನ್ ಮೂಲಕ ತಿಳಿಸಿರುತ್ತೇನೆ. ನಂತರ

ನಾವು ಅದೇ ದಿನ ಬೆಳಗಿನ ಜಾವ ಬೆಳಿಗ್ಗೆ 2.10 ಗಂಟೆಗೆ ಸದರಿ ಸ್ಥಳಕ್ಕೆ ಹೋಗಿರುತ್ತೇವೆ. ನಾವು ಸದರಿ ಸ್ಥಳಕ್ಕೆ ಹೋದ ಕೂಡಲೇ ನಾಲ್ಕು / ಐದು ಜನರು ಯಾವುದೋ ವಾಹನವೆಂದು ತಿಳಿದು ಅಡ್ಡಗಟ್ಟಿರುತ್ತಾರೆ. ಆಗ ನಾನು ಮತ್ತು ಸಿಬ್ಬಂದಿಗಳು ಜೀಪಿನಿಂದ ಕೆಳಗೆ ಇಳಿದು, ಅವರುವುಗಳನ್ನು ಹಿಡಿಯಲು ಹೋದಾಗ ಅವರು ನಮ್ಮ ಜೀಪನ್ನು ಪೊಲೀಸ್ ಜೀಪ್ ಎಂದು ಗುರುತಿಸಿ ಓಡಲು ಪ್ರಯತ್ನಿಸಿದರು. ನಾನು ಮತ್ತು ಸಿಬ್ಬಂದಿಗಳು ಅವರನ್ನು ಬೆನ್ನಟ್ಟಿದೆವು. ಆಗ ಚಾಸಾ-8 ಮತ್ತು 9 ರವರು ತಲಾ ಒಬ್ಬೊಬ್ಬರನ್ನು ಹಿಡಿದುಕೊಂಡಿರುತ್ತಾರೆ. ನಂತರ ನಾನು ಚಾಸಾ-10 ಮತ್ತು 11 ರವರು ಸೇರಿ ಉಳಿದ ಮೂವರನ್ನು ಬೆನ್ನಟ್ಟಿ ಅವರ ಪೈಕಿ ಇಬ್ಬರನ್ನು ವಶಕ್ಕೆ ಪಡೆದುಕೊಂಡೆವು. ಇನ್ನೊಬ್ಬ ಆಸಾಮಿಯು ಕತ್ತಲೆಯಲ್ಲಿ ಬಸ್ ನಿಲ್ದಾಣದ ಹಿಂಭಾಗದಿಂದ ಓಡಿ ಹೋಗಿ ತಪ್ಪಿಸಿಕೊಂಡನು.

5. ನಂತರ ನಾವು ಹಿಡಿದ ವ್ಯಕ್ತಿಗಳನ್ನು ಜೀಪಿನ ಬಳಿ ಕರೆದುಕೊಂಡು ಬಂದೆವು. ಅಷ್ಟರಲ್ಲಿ ಅಲ್ಲಿಗೆ ಚಾಸಾ-13 ರಿಂದ 16 ರವರು ಅಲ್ಲಿಗೆ ಬಂದರು. ಸದರಿ ಆಸಾಮಿಗಳನ್ನು ಕುರಿತು ಸದರಿ ಸ್ಥಳದಲ್ಲಿ ಅವರ ಇರುವಿಕೆಯ ಬಗ್ಗೆ ಕೇಳಲಾಗಿ, ಅವರು ಒಬ್ಬೊಬ್ಬರು ಒಂದೊಂದು ರೀತಿಯಾಗಿ ಉತ್ತರಿಸಿದ್ದು ,ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ಸದರಿ ವ್ಯಕ್ತಿಗಳ ಕೈಯಲ್ಲಿ ಟಾರ್ಚ್ , ಕಬ್ಬಿಣದ ರಾಡು, ಖಾರದ ಪುಡಿ, ಡ್ರ್ಯಾಗರ್ ಮತ್ತು ಒಂದು ಪಿಸ್ತೂಲ್ ಇರುವುದು ಕಂಡು ಬಂದಿತು. ಅವರನ್ನು ಕುರಿತು ಸದರಿ ಪಿಸ್ತೂಲನ್ನು ಹೊಂದಲು ಪರವಾನಗಿ ಇದೆಯೇ ಎಂದು ಕೇಳಲಾಗಿ ಅವರು ಇಲ್ಲವೆಂದು ತಿಳಿಸಿರುತ್ತಾರೆ. ಸದರಿ ವ್ಯಕ್ತಿಗಳ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಅವರು, ಹೆಸರು ಮತ್ತು ವಿಳಾಸವನ್ನು ತಿಳಿಸಿರುತ್ತಾರೆ. ತಪ್ಪಿಸಿಕೊಂಡು ಓಡಿ ಹೋದ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಆತನ ಹೆಸರು ನಾಗಿ ಕಿಕ್ಕೇರಿ ಎಂದು

ತಿಳಿಸಿರುತ್ತಾರೆ.

6. ಬಸ್ ನಿಲ್ದಾಣದ ಹೊರ ಭಾಗದಲ್ಲಿ ನಿಲ್ಲಿಸಲಾಗಿದ್ದ ಎರಡು ಮೋಟಾರ್ ಸೈಕಲ್‌ಗಳ ಬಗ್ಗೆ ಸದರಿ ವ್ಯಕ್ತಿಗಳನ್ನು ಕೇಳಲಾಗಿ ಅವರು ಅವುಗಳು ತಮ್ಮದೆಂದು ತಿಳಿಸಿರುತ್ತಾರೆ. ಸದರಿ ಮೋಟಾರ್ ಸೈಕಲ್‌ಗಳ ನ್ನು ಪರಿಶೀಲಿಸಲಾಗಿ ಅವುಗಳ ನೊಂದಣಿ ಸಂ. ಕೆಎ-51/ಇಸಿ-1685 ಮತ್ತು ಕೆಎ-18/ಡಬ್ಲ್ಯೂ -7484 ಆಗಿರುವುದು ಕಂಡು ಬಂದಿತು. ಸದರಿ ವ್ಯಕ್ತಿಗಳು ಮಾರಕಾಸ್ತ್ರಗಳನ್ನು ಇಟ್ಟುಕೊಂಡು ರಾತ್ರಿ ಸಂಚರಿಸುವ ವಾಹನಗಳನ್ನು ನಿರ್ಜನ ಪ್ರದೇಶದಲ್ಲಿ ಅಡ್ಡಗಟ್ಟಿ ಮಾರಕಾಸ್ತ್ರಗಳನ್ನು ತೋರಿಸಿ ಹೆದರಿಸಿ ಅವರಿಂದ ಹಣ ಮತ್ತು ಬಂಗಾರವನ್ನು ದರೋಡೆ ಮಾಡಲು ಹೊಂಚು ಹಾಕಿರುವುದು ಕಂಡು ಬಂದಿದ್ದರಿಂದ ಸದರಿ ವಿಚಾರವನ್ನು ಜಿಲ್ಲಾ ನಿಸ್ತಂತು ಕೊಠಡಿಗೆ ಮತ್ತು ಮೇಲಾಧಿಕಾರಿಗಳಿಗೆ ದೂರವಾಣಿ ಮುಖಾಂತರ ತಿಳಿಸಿರುತ್ತೇನೆ. ನಂತರ ಸದರಿ ವ್ಯಕ್ತಿಗಳ ವಿರುದ್ಧ ಐಪಿಸಿ ಕಲಂ 399, 402 ಮತ್ತು ಆಯುಧ ಕಾಯ್ದೆ ಕಲಂ 3 ಮತ್ತು 25 ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಲು ಪಿರ್ಯಾದನ್ನು ತಯಾರಿಸಿ ಅದನ್ನು ಚಾಸಾ-8 ರವರ ಮುಖಾಂತರ ಇಲಾಖೆಯ ಬೈಕಿನಲ್ಲಿ ಮೂಡಿಗೆರೆ ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ. ಹಾಗೂ ಚಾಸಾ-10 ರವರನ್ನು ಪಂಚರನ್ನು ಕರೆದುಕೊಂಡು ಬರುವಂತೆ ಸೂಚಿಸಿ ಕಳುಹಿಸಿರುತ್ತೇನೆ. ಆ ಬಗ್ಗೆ ನಾನು ಸಲ್ಲಿಸಿದ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ಸಹಿಯನ್ನು ಗುರುತಿಸಿದ ಮೇರೆಗೆ, ದೂರನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

7. ಸದರಿ ದೂರಿನ ಮೇರೆಗೆ ಠಾಣಾಧಿಕಾರಿಯಾಗಿ ಕರ್ತವ್ಯದಲ್ಲಿದ್ದ ಚಾಸಾ-34 ರವರು ಠಾಣಾ ಮೊಕದ್ದಮೆ ಸಂ. 145/2021 ರಂತೆ ಪ್ರಕರಣವನ್ನು ದಿನಾಂಕಃ 18-07-2021 ರಂದು ಬೆಳಿಗ್ಗೆ 3.15 ಗಂಟೆಗೆ ದಾಖಲಿಸಿ ನನಗೆ ದೂರವಾಣಿ ಮೂಲಕ ಸದರಿ

ಮೊಕದ್ದಮೆ ಸಂಖ್ಯೆಯನ್ನು ತಿಳಿಸಿರುತ್ತಾರೆ.

8. ನಂತರ ನಾನು ತನಿಖೆಯನ್ನು ಮುಂದುವರಿಸಿರುತ್ತೇನೆ. ಕೃತ್ಯ ನಡೆದ ಸ್ಥಳಕೆಕ್ಕೆ ಚಾಸಾ-10 ರವರು ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಬಂದಿರುತ್ತಾರೆ. ನಾನು ಸದರಿಯವರಿಗೆ ಪಂಚರಾಗಿ ಸಹಕರಿಸುವಂತೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ಸದರಿ ನೋಟೀಸನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನೋಟೀಸು ಮತ್ತು ಅದರಲ್ಲಿರುವ ಸಹಿಯನ್ನು ಗುರುತಿಸಿದ ಮೇರೆಗೆ, ನೋಟೀಸನ್ನು ನಿಪಿ.2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

9. ಚಾಸಾ-2 ಮತ್ತು 3 ರವರು ಪಂಚರಾಗಿ ಸಹಕರಿಸಲು ಒಪ್ಪಿಕೊಂಡ ಮೇರೆಗೆ ಅವರ ಸಮಕ್ಷಮ ಕೃತ್ಯ ನಡೆದ ಸ್ಥಳ ವನ್ನು ಪರಿಶೀಲಿಸಿ ನೋಡಲಾಗಿ ಸದರಿ ಸ್ಥಳವು ಮೂಡಿಗೆರೆ ತಾಲ್ಲೂಕು ಮುತ್ತಿಗೆಪುರ ಗ್ರಾಮದ ಮುದ್ರೆಮನೆ ಬಸ್ ನಿಲ್ದಾಣದ ಮುಂಭಾಗ ಹಾದು ಹೋಗಿರುವ ಮಂಗಳೂರು -ವಿಲ್ಲೂಪುರಂ ರಾಷ್ಟ್ರೀಯ ಹೆದ್ದಾರಿ 73 ಆಗಿರುತ್ತದೆ. ಸದರಿ ಸ್ಥಳದಲ್ಲಿ ಸುಮಾರು 20 ಮೀಟರ್ ಅಂತರದಲ್ಲಿ 2 ಕಡೆ ಹಂಪ್ಸ್ ಗಳಿರುವುದು ಮತ್ತು ರಸ್ತೆಯು ತಿರುವಿನಿಂದ ಕೂಡಿರುವುದು ಕಂಡು ಬಂದಿತು. ಪಂಚರ ಸಮಕ್ಷಮ ಸೆರೆಸಿಕ್ಕ ವ್ಯಕ್ತಿಗಳ ಹೆಸರು ಮತ್ತು ವಿಳಾಸವನ್ನು ಕೇಳಿ ಪಡೆದುಕೊಂಡ ವಿವರಗಳನ್ನು ಪಂಚನಾಮೆಯಲ್ಲಿ ನಮೂದು ಮಾಡಿರುತ್ತೇನೆ.

10. ಮೇಲೆ ಹೇಳಿದಂತೆ ಕೃತ್ಯದಲ್ಲಿ ಭಾಗಿಯಾದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ ಸ್ಥಳದಲ್ಲಿ ಸೆರೆ ಸಿಕ್ಕ ವ್ಯಕ್ತಿಗಳು 1 ರಿಂದ 4 ನೇ ಆರೋಪಿತರಾಗಿರುತ್ತಾರೆ. ತಪ್ಪಿಸಿಕೊಂಡು ಓಡಿ ಹೋದ ವ್ಯಕ್ತಿ 5 ನೇ ಆರೋಪಿಯಾಗಿರುತ್ತಾನೆ. ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರುಪಡಿಸಿರುವ 1 ಮತ್ತು 3 ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿ ಬೇರೊಂದು ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು

ಈ ದಿನ ಬಾಡಿ ವಾರೆಂಟ್ ನಲ್ಲಿ ಹಾಜರುಡಿಪಡಿಸಿರುವುದಿಲ್ಲ. 4 ನೇ ಆರೋಪಿ ಗೈರು ಹಾಜರಾಗಿದ್ದು, ಆತನ ಪರವಾಗಿ ವಕೀಲರು ಹಾಜರಿರುವುದಿಲ್ಲ, ಹಾಗಾಗಿ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಭಾನುಮತಿ ಬಿ.ಸಿ)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ಸಾಕ್ಷಿಯ ಸಹಿ